**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.**

**ಸಿಸಿ ಸಂಖ್ಯೆ: 287/2015 ಚಾ.ಸಾ.19 ಪ್ರಾ.ಸಾ–15**

| | | |
|---|---|---|
| ಹೆಸರು | : | ಎನ್. ವಿ. ರಾಮಚಂದ್ರ |
| ತಂದೆಯ ಹೆಸರು | : | ಲೇಟ್ ಎನ್.ಪಿ. ವೆಂಕಟರಮಣಯ್ಯ |
| ವಯಸ್ಸು | : | 74 |
| ವೃತ್ತಿ | : | ನಿವೃತ್ತ ನೌಕರ |
| ವಾಸ | : | ಮೈಸೂರು |

ದಿನಾಂಕ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2004 ರಿಂದ 2010 ರವರೆಗೆ ತಿ. ನರಸೀಪುರದ ಪಟ್ಟಣ ಪಂಚಾಯಿತಿಯಲ್ಲಿ ಕಂದಾಯ ನಿರೀಕ್ಷಕನಾಗ ಕರ್ತವ್ಯ ನಿರ್ವಹಿಸಿದ್ದೇನೆ.

ಆರೋಪಿತರ, ಚಾಸಾ–1,15, 20 ರಿಂದ 23 ಮತ್ತು ಪ್ರಾಸಾ–12 ರಿಂದ 14 ರವರ ಪರಿಚಯವಿದೆ. ಆರೋಪಿತರು ಯಾವ ಕೃತ್ಯ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

2ನೇ ಆರೋಪಿತ ಮತ್ತು ಮೃತ 1ನೇ ಆರೋಪಿತರವರು ಆ ಪಟ್ಟಣ ಪಂಚಾಯಿತಿಯ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲವೆಂದು ಚಾಸಾ-1 ರವರು ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ರೀತಿ ಕೃತ್ಯ ಮಾಡಿ ಬ್ಯಾಂಕಿನಿಂದ ಹಣವನ್ನು ಪಡೆದಿದ್ದರು ಎಂದರೆ ನನಗೆ ಮಾಹಿತಿಯಿಲ್ಲ. ಆ ಹಣವನ್ನು ಸರ್ಕಾರದ ಕೆಲಸಕ್ಕೆ ಬಳಸದೆ ಅವರ ಸ್ವಂತಕ್ಕೆ ಬಳಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

2ನೇ ಆರೋಪಿತ ಆ ಪಂಚಾಯಿತಿಯ ಖಾತೆಯ ರೂ.65,000/- ಹಣವನ್ನು ಮತ್ತು ನೀರಿನ ತೆರಿಗೆ ಬಾಬ್ತು ಖಾತೆಯಿಂದ ರೂ.1,63,000/-ಹಣವನ್ನು ಒಟ್ಟು ರೂ.2,28,000/- ಹಣವನ್ನು ಚಾಸಾ-1 ರವರ ಸಹಿಯನ್ನು ಚೆಕ್ಕುಗಳ ಮೇಲೆ ಸೃಷ್ಟಿಸಿ, ತನ್ನ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡಿರುವ ವಿಷಯ ನನಗೆ ತಿಳಿಯಿತು ಎಂದರೆ ಸರಿಯಲ್ಲ.

ಆರೋಪಿತರು ಸೇರಿ ರೂ.1,98,58,472-00 ನ್ನು ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಬಾರಿ ಅವ್ಯವಹಾರ ಮತ್ತು ಭ್ರಷ್ಟಾಚಾರ ಮಾಡಿದ್ದು, ಅವರಿಂದ ಆ ಹಣವನ್ನು ಜಂಟಿಯಾಗಿ, 1ನೇ ಆರೋಪಿತನಿಂದ ರೂ.40,43,078-00 ನ್ನು ವಸೂಲಿ ಮಾಡಬೇಕು ಎಂದು ಮತ್ತು 2ನೇ ಆರೋಪಿತನಿಂದ ರೂ.2,28,000-00 ವನ್ನು ವಸೂಲಿ ಮಾಡಬೇಕು ಎಂದು ಸಹಾಯಕ ನಿಯಂತ್ರಕರು ಸ್ಥಳೀಯ

ಲೆಕ್ಕಪರಿಶೋಧನ ವರ್ತುಲ, ಮೈಸೂರು ರವರು ಸೂಚಿಸಿದ್ದು ಮತ್ತು ಆರೋಪಿತರ ಕೃತ್ಯದ ಮಾಹಿತಿ ಆ ನಿಯಂತ್ರಕರ ವರದಿಯಲ್ಲಿ ನಮೂದಾಗಿತ್ತು ಎಂದರೆ ಸರಿಯಲ್ಲ.

ನಾನು ಆ ಕುರಿತು ಪೊಲೀಸರಿಗೆ ಹೇಳಿಕೆಯನ್ನು ದಿನಾಂಕ 12.06.2010 ರಂದು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಂದ ಅದನ್ನು ನಿಪಿ.29 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ಪಾಟೀ ಸವಾಲು ಏನೂ ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.**

**ಸಿಸಿ ಸಂಖ್ಯೆ: 287/2015 ಚಾ.ಸಾ–15 ಪ್ರಾ.ಸಾ–16**

| | | |
|---|---|---|
| ಹೆಸರು | : | ಶ್ರೀನಿವಾಸ್ |
| ತಂದೆಯ ಹೆಸರು | : | ಲೇಟ್ ಲಕ್ಷ್ಮಣರಾವ್ |
| ವಯಸ್ಸು | : | 71 |
| ವೃತ್ತಿ | : | ನಿವೃತ್ತ ನೌಕರ |
| ವಾಸ | : | ಕೆ.ಆರ್. ನಗರ |

**ದಿನಾಂಕ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು 2005 ರಿಂದ 2010 ರವರೆಗೆ ತಿ. ನರಸೀಪುರದ ಪಟ್ಟಣ ಪಂಚಾಯಿತಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಆರೋಪಿತರ, ಚಾಸಾ–1, 20 ರಿಂದ 23 ಮತ್ತು ಪ್ರಾಸಾ–12 ರಿಂದ 15 ರವರ ಪರಿಚಯವಿದೆ. ಆರೋಪಿತರು ಯಾವ ಕೃತ್ಯ ಮಾಡಿದ್ದಾರೆಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಅವರು ಒಂದು ಹಗರಣ ಮಾಡಿದ್ದಾರೆಂದು ಕಚೇರಿಯಲ್ಲಿ ಮಾತನಾಡುತ್ತಿದ್ದರು. ಅದು ಯಾವ ಹಗರಣವೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ**

**ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

2ನೇ ಆರೋಪಿತ ಮತ್ತು ಮೃತ 1ನೇ ಆರೋಪಿತರವರು ಆ ಪಟ್ಟಣ ಪಂಚಾಯಿತಿಯ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರಲಿಲ್ಲವೆಂದು ಚಾಸಾ-1 ರವರು ಹೇಳಿದ್ದರು ಎಂದರೆ ಸರಿಯಲ್ಲ. ಆರೋಪಿತರು ಆ ರೀತಿ ಕೃತ್ಯ ಮಾಡಿ ಬ್ಯಾಂಕಿನಿಂದ ಹಣವನ್ನು ಪಡೆದಿದ್ದರು ಎಂದರೆ ನನಗೆ ಮಾಹಿತಿಯಿಲ್ಲ. ಆ ಹಣವನ್ನು ಸರ್ಕಾರದ ಕೆಲಸಕ್ಕೆ ಬಳಸದೆ ಅವರ ಸ್ವಂತಕ್ಕೆ ಬಳಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

2ನೇ ಆರೋಪಿತ ಆ ಪಂಚಾಯಿತಿಯ ಖಾತೆಯ ರೂ.65,000/- ಹಣವನ್ನು ಮತ್ತು ನೀರಿನ ತೆರಿಗೆ ಬಾಬ್ತು ಖಾತೆಯಿಂದ ರೂ.1,63,000/-ಹಣವನ್ನು ಒಟ್ಟು ರೂ.2,28,000/- ಹಣವನ್ನು ಚಾಸಾ-1 ರವರ ಸಹಿಯನ್ನು ಚೆಕ್ಕುಗಳ ಮೇಲೆ ಸೃಷ್ಟಿಸಿ, ತನ್ನ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡಿರುವ ವಿಷಯ ನನಗೆ ತಿಳಿಯಿತು ಎಂದರೆ ಸರಿಯಲ್ಲ.

ಆರೋಪಿತರು ಸೇರಿ ರೂ.1,98,58,472-00 ನ್ನು ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಬಾರಿ ಅವ್ಯವಹಾರ ಮತ್ತು ಭ್ರಷ್ಟಾಚಾರ ಮಾಡಿದ್ದು, ಅವರಿಂದ ಆ ಹಣವನ್ನು ಜಂಟಿಯಾಗಿ, 1ನೇ ಆರೋಪಿತನಿಂದ ರೂ.40,43,078-00 ನ್ನು ವಸೂಲಿ ಮಾಡಬೇಕು ಎಂದು ಮತ್ತು 2ನೇ ಆರೋಪಿತನಿಂದ ರೂ.2,28,000-00

ವನ್ನು ವಸೂಲಿ ಮಾಡಬೇಕು ಎಂದು ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನ ವರ್ತುಲ, ಮೈಸೂರು ರವರು ಸೂಚಿಸಿದ್ದು ಮತ್ತು ಆರೋಪಿತರ ಕೃತ್ಯದ ಮಾಹಿತಿ ಆ ನಿಯಂತ್ರಕರ ವರದಿಯಲ್ಲಿ ನಮೂದಾಗಿತ್ತು ಎಂದರೆ ಸರಿಯಲ್ಲ.

ನಾನು ಆ ಕುರಿತು ಪೊಲೀಸರಿಗೆ ಹೇಳಿಕೆಯನ್ನು ದಿನಾಂಕ 12.06.2010 ರಂದು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಂದ ಅದನ್ನು ನಿಪಿ.30 ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ಪಾಟೀ ಸವಾಲು ಏನೂ ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**